# ದುರ್ಗಿ ವರಹ

ಚಿತ್ರದುರ್ಗ ಪಾಳೇಗಾರರ ಕಾಲದಲ್ಲಿ ವ್ಯವಹಾರಕ್ಕೆ ಬಳಸುತ್ತಿದ್ದ ಈ ಚಿನ್ನದ ನಾಣ್ಯ 'ದುರ್ಗಿ ವರಹ'. ನಾಣ್ಯದ ಚಲಾವಣೆ ಕಾಲಮಾನ ಕ್ರಿ.ಶ. 1500–1800 ಎಂದು ತಿಳಿದುಬರುತ್ತದೆ. ದುರ್ಗಿ ವರಹದ ತೂಕ 3.31 ಗ್ರಾಂ. ಅದರಲ್ಲಿ ಇರುವ ಚಿತ್ರ ಶ್ರೀಕೃಷ್ಣ (ಲಡ್ಡು ಗೋಪಾಲ) ನದು. ವಿಜಯನಗರದ ಅರಸ ಪ್ರತಾಪಸಿಂಹರಾಯರ ಕಾಲದ್ದು. ಆದರೆ ದುರ್ಗದಲ್ಲಿ ಈ ಕುರಿತು ಉತ್ಖನನವಾಗಲಿ, ಸಂಶೋಧನೆಯಾಗಲಿ ನಡೆದಿಲ್ಲ.

**-ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ**





# ಬಸ್ ನಿಲ್ದಾಣದಲ್ಲಿ ಸ್ಮಾರಕ!

ಇತ್ತೀಚೆಗೆ ರಾಯಚೂರಿನ ಬಸ್‌ನಿಲ್ದಾಣವು ಆಧುನಿಕ ಸ್ಪರ್ಶದಿಂದ ನಳನಳಿಸುತ್ತಿದೆ. ನಿಲ್ದಾಣದ ಮಧ್ಯೆ ಸುಮಾರು ಐದು ಶತಮಾನಗಳಷ್ಟು ಪುರಾತನ ಸ್ಮಾರಕವೊಂದು ಜನರ ಗಮನ ಸೆಳೆಯುತ್ತಿದೆ.

ಈ ಕುಲುಮೆ ಆಕಾರದ ಕಟ್ಟಡದ ಬಗ್ಗೆ ನಿರ್ದಿಷ್ಟ ಮಾಹಿತಿ ಇಲ್ಲ. ಕೆಲವರ ಪ್ರಕಾರ ಈ ಹಿಂದೆ ಇದರಲ್ಲಿ ಸೈನಿಕರಿಗೆ ಅಗತ್ಯವಾದ ಖಡ್ಗ, ಗುರಾಣಿ, ಭರ್ಚಿಗಳನ್ನು ಇಡಲು ನಿರ್ಮಿಸಿದ್ದರು. ಮತ್ತೊಬ್ಬರ ಪ್ರಕಾರ ಕೋಟೆ ನಿರ್ಮಾಣದ ಕಾರ್ಯದಲ್ಲಿ ಗುದ್ದಲಿ, ಹಾರೆ, ಚಾಣ ಇವುಗಳನ್ನು ಇಡಲು ರಚಿಸಿದ್ದರು. ಈ ಕಟ್ಟಡವನ್ನು ಗಾರೆಯಿಂದ ನಿರ್ಮಾಣ ಮಾಡಲಾಗಿದ್ದು, ಚಾವಣಿಯು ಗೋಲಾಕಾರದಲ್ಲಿದೆ. ಕಟ್ಟಡಕ್ಕೆ ಹೊಂದಿಕೊಂಡಂತೆ ಕುಲುಮೆಯಲ್ಲಿನ ಹೊಗೆ ಹೋಗಲು ಚಿಮಣಿ ನಿರ್ಮಾಣ ಮಾಡಲಾಗಿದೆ. ಈ ಸ್ಮಾರಕದ ನಿಖರ ಮಾಹಿತಿ ತಿಳಿಯಲು ಸಂಶೋಧನೆಯಾಗಬೇಕಿದೆ.

**-ಈರಣ್ಣ ಬೆಂಗಾಲಿ, ರಾಯಚೂರು**

# ದೇವಸ್ಥಾನವಲ್ಲ.. ದಾಸಸ್ಥಾನ!

ಹಾಸನ ಜಿಲ್ಲೆಯ ರುದ್ರಪಟ್ಟಣ ತಾಲ್ಲೂಕಿನ ಅರಕಲಗೂಡಿನಲ್ಲೊಂದು 'ಸಂಗೀತ ಗ್ರಾಮ'ವಿದೆ. ಈ ಗ್ರಾಮದಲ್ಲಿ ಅಪರೂಪದ ದೇವಾಲಯವಿದ್ದು, ಇದು ದಾಸರ ತಂಬೂರಿಯ ವಿನ್ಯಾಸದಲ್ಲಿದೆ. ಈ ದೇವಸ್ಥಾನದ ಒಳಗಡೆ ಇರುವುದೆಲ್ಲಾ ದಾಸ ಶ್ರೇಷ್ಠರ ಮೂರ್ತಿಗಳು! ಇಲ್ಲಿಯ ನಿವಾಸಿಗಳು ದಾಸ ಶ್ರೇಷ್ಠರಾದ ಕನಕದಾಸ, ಪುರಂದರದಾಸ, ವಾದಿರಾಜ, ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತ, ಶ್ಯಾಮಶಾಸ್ತ್ರಿ ಮುಂತಾದ ಶ್ರೇಷ್ಠರನ್ನು ಗೌರವಿಸಿ ಪೂಜಿಸುತ್ತಾರೆ. ಇದಕ್ಕೆ ದೇವಸ್ಥಾನವಲ್ಲ, ದಾಸಸ್ಥಾನ ಎನ್ನಬಹುದೇನೋ!

**ಚಿತ್ರ-ಬರಹ: ಕಾವ್ಯಾ ಶರತ್, ಶಿರಾಲಿ**

